| A3 | Date: 01-09-2024<br>Maximum Marks : 100<br>Total Duration : 150 Minutes<br>Maximum Time for Answering : 120 Minutes<br>Time : 10.30 am to 12.30 pm | Serial Number : |
|---|---|---|
| VERSION CODE | MENTION YOUR REGISTER NUMBER | Subject Code: BC0109P124NHK |

BMTC CONDUCTOR (RPC) – 2024 GK – Paper I.

**DOs:**

**Paper-I**

1. This question booklet is issued to you by the invigilator after the **2nd bell** i.e., **after 10.25 am.**
2. Check whether the Register Number has been entered and shaded the respective circles on the OMR answer sheet.
3. The version code and serial number of this question booklet should be entered on the OMR answer sheet and the respective circles should also be shaded completely.
4. The Version Code and Serial Number of this question booklet should be entered on the Nominal Roll without any mistakes.
5. Compulsorily sign at the bottom portion of the OMR answer sheet in the space provided.

**DONTs:**

1. **THE TIMING AND MARKS PRINTED ON THE OMR ANSWER SHEET SHOULD NOT BE DAMAGED / MUTILATED / SPOILED.**
2. **The 3rd Bell rings at 10.30 am, till then**
   - Do not remove the seal present on the right hand side of this question booklet.
   - Do not look inside this question booklet or start answering on the OMR answer sheet.

A3

## IMPORTANT INSTRUCTIONS TO CANDIDATES

1. **In case of usage of signs and symbols in the questions, the regular textbook connotation should be considered unless stated otherwise.**
2. This question booklet contains 100 (items) questions and each question will have one statement and four different options / responses & out of which you have to choose one correct answer.
3. After the **3rd Bell rings at 10.30 am**, remove the paper seal of this question booklet and check that this booklet does not have any unprinted or torn or missing pages or items etc., if so, get it replaced by a complete test booklet. Read each item and start answering on the OMR answer sheet.
4. Completely **darken / shade** the relevant circle with a **blue or black ink ballpoint pen against the question number on the OMR answer sheet.**

| ಸರಿಯಾದ ಕ್ರಮ CORRECT METHOD | ತಪ್ಪು ಕ್ರಮಗಳು WRONG METHODS | | |
|---|---|---|---|
| | ⊗ ② ③ ④ | ① ② ③ ④ | ① ● ● ④ |
| ① ● ③ ④ | ◐ ② ③ ④ | ① ◉ ③ ④ | ① ② ③ ④ |

5. Please note that even a minute unintended ink dot on the OMR answer sheet will also be recognized and recorded by the scanner. Therefore, avoid multiple markings of any kind on the OMR answer sheet.
6. Use the space provided on each page of the question booklet for Rough Work. Do not use the OMR answer sheet for the same.
7. **After the last bell is rung at 12.30 pm**, stop marking on the OMR answer sheet. Hand over the **OMR answer sheet** to the room invigilator as it is.
8. After separating the top sheet (Office copy), the invigilator will return the bottom sheet replica (candidate's copy) to you to carry home for self-evaluation.
9. There is a negative valuation, for each wrong answer ¼ of marks will be deducted.

**NOTE: In case of any discrepancy between English and Kannada Versions, the English version will be taken as final.**

SHIKARAT.COM

1. ಈ ಕೆಳಕಂಡ ಯಾವ ರಾಜ್ಯ/ರಾಜ್ಯಗಳಲ್ಲಿ ಪರಿಶಿಷ್ಟ ಜಾತಿಯವರಿಗೆ ಪಂಚಾಯತಿ ಸೀಟ್‌ನಲ್ಲಿ ಮೀಸಲಾತಿ ಅನ್ವಯಿಸುವುದಿಲ್ಲ?

(1) ಅರುಣಾಚಲ ಪ್ರದೇಶ

(2) ಅರುಣಾಚಲ ಪ್ರದೇಶ ಮತ್ತು ಅಸ್ಸಾಮ್

(3) ಅಸ್ಸಾಮ್

(4) ಅಸ್ಸಾಮ್ ಮತ್ತು ಮಣಿಪುರ

2. ಇತ್ತೀಚೆಗೆ ಯಾವ ರಾಜ್ಯ ಸರ್ಕಾರವು ''ಸಾಮಾಜಿಕ ನ್ಯಾಯದ ಪ್ರತಿಮೆ'' ಎಂದು ಬಣ್ಣಿಸಲ್ಪಡುವ ಡಾ. ಬಿ.ಆರ್. ಅಂಬೇಡ್ಕರ್ ರವರ ವಿಶ್ವದ ಅತ್ಯಂತ ಎತ್ತರದ ಪ್ರತಿಮೆಯನ್ನು ಅನಾವರಣಗೊಳಿಸಿತು?

(1) ಕರ್ನಾಟಕ

(2) ಆಂಧ್ರಪ್ರದೇಶ

(3) ರಾಜಸ್ಥಾನ್

(4) ಉತ್ತರ ಪ್ರದೇಶ

3. ಭಾರತದಲ್ಲಿ ಸಂಸತ್ತಿನ ಅಧಿವೇಶನಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಸರಿಯಾದ ಹೇಳಿಕೆಯನ್ನು ಆಯ್ಕೆ ಮಾಡಿ:

ಹೇಳಿಕೆ – 1: ಸಂಸತ್ತಿನ ಎರಡು ಅಧಿವೇಶನಗಳ ನಡುವಿನ ಗರಿಷ್ಠ ಅಂತರವು 6 ತಿಂಗಳಿಗಿಂತ ಹೆಚ್ಚಿಗೆ ಇರಬಾರದು.

ಹೇಳಿಕೆ – 2: ಸೈನ್ ಡೈ ಅಡ್ಜರ್ನ್‌ಮೆಂಟ್ ಎಂದರೆ ಒಂದು ವಾರದ ಅವಧಿಗೆ ಸಂಸತ್ತಿನ ಅಧಿವೇಶನವನ್ನು ಸ್ಥಗಿತಗೊಳಿಸುವುದು.

ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿದೆ?

(1) ಹೇಳಿಕೆ – 1 ಸರಿ ಹೇಳಿಕೆ– 2 ತಪ್ಪು

(2) ಹೇಳಿಕೆ– 1 ತಪ್ಪು ಹೇಳಿಕೆ– 2 ಸರಿ

(3) ಎರಡೂ ಹೇಳಿಕೆಗಳು ಸರಿ.

(4) ಎರಡೂ ಹೇಳಿಕೆಗಳು ತಪ್ಪು.

4. ಈ ಕೆಳಕಂಡ ಭಾರತದ ಯಾವ ಪ್ರಧಾನ ಮಂತ್ರಿ/ಪ್ರಧಾನ ಮಂತ್ರಿಗಳು 'ಅವಿಶ್ವಾಸ ನಿರ್ಣಯ' ದ ಒಂದು ಮತದಿಂದ ಸೋಲುಂಡರು?

a) ಹೆಚ್.ಡಿ. ದೇವೇಗೌಡ

b) ಮೊರಾರ್ಜಿ ದೇಸಾಯಿ

c) ವಿ.ಪಿ.ಸಿಂಗ್

d) ಅಟಲ್ ಬಿಹಾರಿ ವಾಜಪೇಯಿ

ಕೆಳಗೆ ನೀಡಿರುವ ಕೋಡ್‌ಗಳನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

(1) a ಮತ್ತು b ಮಾತ್ರ

(2) c ಮಾತ್ರ

(3) a ಮಾತ್ರ

(4) d ಮಾತ್ರ

SPACE FOR ROUGH WORK

SHIKARA.COM

5. ಕೆಳಗಿನವುಗಳಲ್ಲಿ ದೇಶ ಮತ್ತು ಗಡಿರೇಖೆಗಳ ಸರಿಯಾದ ಹೊಂದಾಣಿಕೆಯಾಗುವ ಜೋಡಿಗಳಾವುವು?

a) ಭಾರತ-ಚೀನಾ : ಮ್ಯಾಕ್ ಮೋಹನ್‌ರೇಖೆ

b) ಭಾರತ - ಅಫ್ಘಾನಿಸ್ತಾನ : 39ನೇ ಸಮಾಂತರ ರೇಖೆ

c) ಭಾರತ - ಪಾಕಿಸ್ತಾನ : ರ್‍ಯಾಡ್ ಕ್ಲಿಫ್ ರೇಖೆ

ಕೆಳಗೆ ಕೊಟ್ಟಿರುವ ಸಂಕೇತಗಳನ್ನು ಬಳಸಿ ಸರಿ ಉತ್ತರವನ್ನು ಆಯ್ಕೆಮಾಡಿ.

(1) a ಮಾತ್ರ

(2) b ಮಾತ್ರ

(3) a & b ಮಾತ್ರ

(4) a ಮತ್ತು c ಮಾತ್ರ

6. 'ದೇವರಾಜ್ ಅರಸು ವಸತಿ ಯೋಜನೆ' ಈ ಕೆಳಗಿನ ವರ್ಗದವರಿಗಾಗಿ ಇದೆ.

a) HIV ಸೋಂಕಿತರು & ದೇವದಾಸಿಯರು

b) ಕೃಷಿಕರು

c) ಸಫಾಯಿ ಕರ್ಮಚಾರಿಗಳು

d) ಕೈಗಾರಿಕಾ ಕಾರ್ಮಿಕರು

(1) a ಮಾತ್ರ

(2) b ಮಾತ್ರ

(3) a ಮತ್ತು c ಮಾತ್ರ

(4) d ಮಾತ್ರ

SHIKARAT.COM

7. ಗ್ರಾಮೀಣ ಪ್ರದೇಶದಲ್ಲಿ ಮನೆ ಹೊಂದಿರುವ ಕುಟುಂಬದ ನಿವಾಸಿಗಳಿಗೆ ಮಾಲೀಕತ್ವದ ದಾಖಲೆ ನೀಡುವ ಉದ್ದೇಶದಿಂದ ಆರಂಭಿಸಲಾಗಿರುವ ಕೇಂದ್ರ ವಲಯ ಯೋಜನೆಯ ಹೆಸರು ಏನು?

(1) ರಾಷ್ಟ್ರೀಯ ಗ್ರಾಮ ಸ್ವರಾಜ್ ಅಭಿಯಾನ

(2) ಗ್ರಾಮ ಪಂಚಾಯತ್ ಡೆವಲಪ್‌ಮೆಂಟ್ ಪ್ಲಾನ್

(3) ಸ್ವಾಮಿತ್ವ

(4) ಸಬ್‌ಕಾ ಸಾತ್, ಸಬ್ ಕಾ ವಿಕಾಸ್

8. ಕರ್ನಾಟಕ ರಾಜ್ಯ ಮಸಾಲೆ ಅಭಿವೃದ್ಧಿ ಮಂಡಳಿಯ ಕೇಂದ್ರ ಕಛೇರಿ ಎಲ್ಲಿದೆ?

(1) ಹುಬ್ಬಳ್ಳಿ

(2) ಕೊಡಗು

(3) ಚಿಕ್ಕಮಗಳೂರು

(4) ಮಂಗಳೂರು

SPACE FOR ROUGH WORK

9. ಹಣಕಾಸು ಇಲಾಖೆ 2023 ರಲ್ಲಿ ಜಾರಿಗೆ ತಂದ 'ಮಹಿಳಾ ಸಮ್ಮಾನ್' ಪ್ರಮಾಣ ಪತ್ರದ ಕಾಲಾವಧಿ ಎಷ್ಟು?

(1) 01 ವರ್ಷ
(2) 02 ವರ್ಷ
(3) 03 ವರ್ಷ
(4) 05 ವರ್ಷ

10. ಭೂಮಿಯ ಭೂಮಧ್ಯ ರೇಖೆಯಲ್ಲಿ ಒಬ್ಬ ಹುಡುಗ 40 ಕೆಜಿ ತೂಕ ಇರುತ್ತಾನೆ. ಅವನು ಉತ್ತರ ಧ್ರುವದ ಕಡೆಗೆ ಚಲಿಸಲು ಆರಂಭಿಸಿದರೆ, ಆತನ ತೂಕ ___________

(1) ಕಡಿಮೆಯಾಗುತ್ತಾ ಹೋಗುತ್ತದೆ
(2) ಅಷ್ಟೇ ಇರುತ್ತದೆ
(3) ಹೆಚ್ಚಾಗುತ್ತಾ ಹೋಗುತ್ತದೆ
(4) ಆರಂಭದಲ್ಲಿ ಕಡಿಮೆಯಾಗುತ್ತದೆ ನಂತರ ಹೆಚ್ಚಾಗುತ್ತದೆ

11. ತಂಪಾದ ನೀರಿನ ಲೋಟದ ಹೊರಭಾಗದಲ್ಲಿ ನೀರಿನ ಹನಿಗಳನ್ನು ನಾವು ನೋಡುತ್ತೇವೆ. ಏಕೆಂದರೆ

(1) ಗಾಳಿಯಲ್ಲಿನ ನೀರಿನ ಆವಿಯು ತಂಪಾದ ನೀರಿನ ಲೋಟಕ್ಕೆ ಸಂಪರ್ಕಗೊಂಡಾಗ ಶಕ್ತಿಯನ್ನು ಕಳೆದುಕೊಳ್ಳುತ್ತದೆ.
(2) ಗಾಳಿಯಲ್ಲಿನ ನೀರಿನ ಆವಿಯು ತಂಪಾದ ನೀರಿನ ಲೋಟಕ್ಕೆ ಸಂಪರ್ಕಗೊಂಡಾಗ ಶಕ್ತಿಯನ್ನು ಕಳೆದುಕೊಳ್ಳುತ್ತದೆ.
(3) ತಂಪಾದ ನೀರಿನ ಲೋಟವು ಗಾಳಿಯಲ್ಲಿನ ನೀರಿನ ಆವಿಯ ಸಂಪರ್ಕಕ್ಕೆ ಬಂದಾಗ ಶಕ್ತಿಯನ್ನು ಪಡೆದುಕೊಳ್ಳುತ್ತದೆ.
(4) ತಂಪಾದ ನೀರಿನ ಲೋಟವು ಗಾಳಿಯಲ್ಲಿನ ನೀರಿನ ಆವಿಯ ಸಂಪರ್ಕಕ್ಕೆ ಬಂದಾಗ ಶಕ್ತಿ ಕಳೆದುಕೊಳ್ಳುತ್ತದೆ.
(4) ತಂಪಾದ ನೀರಿನ ಲೋಟವು ಗಾಳಿಯಲ್ಲಿನ ನೀರಿನ ಆವಿಯ ಸಂಪರ್ಕಕ್ಕೆ ಬಂದಾಗ ಶಕ್ತಿ ಪಡೆದು ಕೊಳ್ಳುತ್ತದೆ.

SHIKARAT.COM

12. ಕೆಳಗಿನವುಗಳಿಂದ ಸರಿಯಲ್ಲದ ಹೊಂದಿಕೆಯನ್ನು ಆಯ್ಕೆ ಮಾಡಿ :

a) ಮೀನುಗಳು – ಶೀತ ರಕ್ತ ಪ್ರಾಣಿಗಳು
b) ಪಕ್ಷಿಗಳು – ಬಿಸಿ ರಕ್ತ ಪ್ರಾಣಿಗಳು
c) ಸಸ್ತನಿಗಳು – ಸ್ತನ ಗ್ರಂಥಿಗಳನ್ನು ಹೊಂದಿರುತ್ತವೆ
d) ಕಪ್ಪೆಗಳು – ಎರಡು ಕೋಣೆಗಳುಳ್ಳ ಹೃದಯವನ್ನು ಹೊಂದಿರುತ್ತವೆ.

(1) a, b, c ಮಾತ್ರ
(2) d ಮಾತ್ರ
(3) b ಮತ್ತು c ಮಾತ್ರ
(4) a ಮಾತ್ರ

13. ಆರ್ಥಿಕವಾಗಿ ಮುಖ್ಯವಾಗಿರುವ ಕೀಟಗಳಾದ ಜೇನು ನೊಣ, ರೇಷ್ಮೆ ಹುಳು ಮತ್ತು ಅರಗು ಕೀಟ ಪ್ರಾಣಿಗಳ ಯಾವ ವಂಶಕ್ಕೆ ಸೇರುತ್ತದೆ?

(1) ಮೃದ್ವಂಗಿಗಳು
(2) ಕಂಟಕ ಚರ್ಮಿಗಳು
(3) ಸಂಧಿಪದಿಗಳು
(4) ವಲಯವಂತಗಳು

SPACE FOR ROUGH WORK

14. ಈ ಕೆಳಗಿನ ಯಾವ ಜೋಡಿಯು ಸರಿಯಾಗಿ ಹೊಂದಾಣಿಕೆಯಾಗುತ್ತದೆ?

| ಭಾಗ – I | ಭಾಗ – II |
|---|---|
| a) ವಿನೆಗರ್ | ಅಸಿಟಿಕ್ ಆಮ್ಲ |
| b) ಟೊಮ್ಯಾಟೋ | ಆಕ್ಸಾಲಿಕ್ ಆಮ್ಲ |
| c) ಲಿಂಬೆ | ಲ್ಯಾಕ್ಟಿಕ್ ಆಮ್ಲ |
| d) ಮೊಸರು | ಸಿಟ್ರಿಕ್ ಆಮ್ಲ |

(1) a ಮಾತ್ರ

(2) a ಮತ್ತು b ಮಾತ್ರ

(3) a, b ಮತ್ತು c ಮಾತ್ರ

(4) a, b, c ಮತ್ತು d

15. ಕೆಳಗಿನ ಯುದ್ಧಗಳನ್ನು ಕಾಲಾನುಕ್ರಮದಲ್ಲಿ ಬರೆಯಿರಿ.

a) ವಾಂಡಿವಾಷ್ ಕದನ

b) ಮೊದಲ ಕರ್ನಾಟಿಕ್ ಯುದ್ಧ

c) ನೇಪಾಳ ಯುದ್ಧ

d) ಬಕ್ಸಾರ್ ಕದನ

ಕೆಳಗಿನ ಸಂಕೇತಗಳಲ್ಲಿ ಸರಿಯಾದುದನ್ನು ಆರಿಸಿ.

(1) a c d b

(2) d c a b

(3) c b d a

(4) b a d c

SHIKARAT.COM

16. ಕೆಳಗಿನವುಗಳನ್ನು ಸರಿಯಾಗಿ ಹೊಂದಿಸಿ ಬರೆಯಿರಿ.

| | | | |
|---|---|---|---|
| a. | ಬಿಹಾರ | i. | ಬೇಗಂ ಹಜರತ್ ಮಹಲ್ |
| b. | ದೆಹಲಿ | ii. | ಅಹ್ಮದುಲ್ಲಾ |
| c. | ಫೈಜಾಬಾದ್ | iii. | ಕುನ್ವರ್ ಸಿಂಗ್ |
| d. | ಔಧ್ | iv. | 2 ನೇ ಬಹದ್ದೂರ್ ಷಾ |

ಕೆಳಗಿನ ಸರಿಯಾದ ಸಂಕೇತವನ್ನು ಗುರುತಿಸಿ.

(1) a – iii, b – ii, c – iv, d – i

(2) a –iv, b – iii, c – i, d – ii

(3) a – i, b - ii, c – iii, d – iv

(4) a – ii, b – iii, c – i, d – iv

SPACE FOR ROUGH WORK

17. ಕೆಳಗಿನ ಐತಿಹಾಸಿಕ ಘಟನೆಗಳನ್ನು ಕಾಲಾನುಕ್ರಮದಲ್ಲಿ ಗುರುತಿಸಿ.

a) ಸ್ವದೇಶಿ ಚಳುವಳಿ

b) ಹೋಂ ರೂಲ್ ಲೀಗ್

c) ಬಂಗಾಳದ ವಿಭಜನೆ

d) ಸೂರತ್ ವಿಭಜನೆ

ಕೆಳಗೆ ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

(1) c a d b
(2) a b c d
(3) a d b c
(4) d c b a

18. ಈ ಕೆಳಗಿನವರಲ್ಲಿ ಯಾರು ಮಂದಗಾಮಿ ನಾಯಕರಾಗಿರಲಿಲ್ಲ ?

(1) ಗೋಪಾಲ ಕೃಷ್ಣ ಗೋಖಲೆ, ಫಿರೋಜ್ ಷಾ ಮೆಹ್ತಾ

(2) ಬಿಪಿನ್ ಚಂದ್ರಪಾಲ್, ಸುಭಾಷ್ ಚಂದ್ರ ಬೋಸ್

(3) ಸುರೇಂದ್ರನಾಥ ಬ್ಯಾನರ್ಜಿ, ಆನಂದ ಮೋಹನ್ ಬೋಸ್

(4) ದಾದಾಬಾಯಿ ನವರೋಜಿ, ಎಂ.ಜಿ.ರಾನಡೆ

19. ಸರಿಯಾದ ಜೋಡಿಯನ್ನು ಗುರುತಿಸಿ.

a) ಚೋಳ - ಹುಲಿ

b) ಚೇರ - ಮೀನು

c) ಪಾಂಡ್ಯ - ನಂದಿ

d) ಪಲ್ಲವ - ವರಾಹ

(1) a ಮತ್ತು b
(2) b ಮತ್ತು c
(3) a ಮಾತ್ರ
(4) a, b, c ಮತ್ತು d

20. ದಕ್ಷಿಣ ಭಾರತದಲ್ಲಿ ವಿಜಯ ನಗರ ಮತ್ತು ಬಹುಮನಿ ಸುಲ್ತಾನ ಮನೆತನಗಳು ಸ್ಥಾಪನೆಯಾದಾಗ ದೆಹಲಿಯನ್ನಾಳುತ್ತಿದ್ದ ಸುಲ್ತಾನ ಯಾರು?

(1) ಅಲ್ಲಾವುದ್ದಿನ್ ಖಿಲ್ಜಿ

(2) ಫಿರೋಜ್ ಷಾ ತುಘಲಕ್

(3) ಮಹಮದ್-ಬಿನ್-ತುಘಲಕ್

(4) ಜಲಾಲುದ್ದೀನ್ ಖಿಲ್ಜಿ

SPACE FOR ROUGH WORK

SHIKARAT.COM

21. ಹುಯೆನ್‌ತ್ಸಾಂಗ್ ಭೇಟಿ ನೀಡಿದ ಈ ಸ್ಥಳದಲ್ಲಿ ಪಲ್ಲವ ಅರಸ ನರಸಿಂಹ ವರ್ಮ ವಿಜಯಸ್ತಂಭ ಸ್ಥಾಪಿಸಿ 'ವಾತಾಪಿ ಕೊಂಡ' ಎಂಬ ಬಿರುದು ಪಡೆದುಕೊಂಡನು.

(1) ಕಂಚಿ

(2) ಬಾದಾಮಿ

(3) ನಳಂದ

(4) ಕನೌಜ್

22. ಭಾರತದ ರಾಷ್ಟ್ರ ಲಾಂಛನವನ್ನು ಈ ಸ್ತಂಭದಿಂದ ಪಡೆಯಲಾಗಿದೆ.

(1) ಅಲಹಾಬಾದ್ ಸ್ತಂಭ ಶಾಸನದಿಂದ

(2) ಸಾರನಾಥ ಸ್ತಂಭದಿಂದ

(3) ಮೆಹ್ರೌಲಿ ಸ್ತಂಭದಿಂದ

(4) ನಿಗಲಿವ ಸ್ತಂಭದಿಂದ

23. ಪ್ರಾಗೈತಿಹಾಸಿಕ ಕಾಲದ ಯಾವ ಹಂತದಲ್ಲಿ ಮಾನವ ಕ್ವಾರ್ಟ್‌ಜೈಟ್ ಶಿಲೆಯನ್ನು ಬಳಸುತ್ತಿದ್ದ ?

(1) ಹಳೆಯ ಶಿಲಾಯುಗದಲ್ಲಿ

(2) ಮಧ್ಯ ಶಿಲಾಯುಗದಲ್ಲಿ

(3) ನವಶಿಲಾಯುಗದಲ್ಲಿ

(4) ಕಬ್ಬಿಣ ಯುಗದಲ್ಲಿ

24. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿರಿ

A) ಉತ್ತರಮೇರೂರ್ ವೈಕುಂಠ ದೇವಸ್ಥಾನದ ಗೋಡೆಯ ಮೇಲೆ ಎರಡು ಶಾಸನಗಳಿವೆ.

R) ಮೊದಲ ಶಾಸನ ಗ್ರಾಮ ಸಭೆಯ ನೀತಿ ನಿಯಮ ಒಳಗೊಂಡಿದೆ. ಎರಡನೆಯ ಶಾಸನ ಸುಧಾರಿತ ನೀತಿ ನಿಯಮ ಒಳಗೊಂಡಿದೆ.

ಕೆಳಗೆ ನೀಡಿದ ಕೋಡುಗಳಿಂದ ಸರಿಯಾದ ಆಯ್ಕೆಯನ್ನು ಗುರುತಿಸಿರಿ.

(1) A ತಪ್ಪು R ಸರಿ

(2) A ಸರಿ R ತಪ್ಪು

(3) A ಮತ್ತು R ಎರಡೂ ಸರಿ

(4) A ಮತ್ತು R ಎರಡೂ ತಪ್ಪು

25. ಪ್ರಸ್ತುತ ಈ ಕೆಳಕಂಡವುಗಳಲ್ಲಿ ಯಾವುದು ಮೂಲಭೂತ ಹಕ್ಕಲ್ಲ ?

(1) ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ

(2) ಅಕ್ರಮ ಬಂಧನದ ವಿರುದ್ಧ ರಕ್ಷಣೆ

(3) ಆಸ್ತಿಯನ್ನು ಹೊಂದುವುದು

(4) ಆತ್ಮಸಾಕ್ಷಿಗೆ ಸರಿಯೆನಿಸಿದ ಧರ್ಮ ಅನುಸರಿಸುವುದು.

SPACE FOR ROUGH WORK

SHIKARAT.COM

26. ಈ ಕೆಳಗಿನವುಗಳಲ್ಲಿ ಯಾವುದು ಶಾಸ್ತ್ರೀಯವಾಗಿ ಮೀನುಗಳ ಗುಂಪಿಗೆ ಸೇರುವುದಿಲ್ಲ ?

(1) ನಕ್ಷತ್ರ ಮೀನು (ಸ್ಟಾರ್ ಫಿಶ್)

(2) ಬಂಗಡೆ ಮೀನು (ಮ್ಯಾಕೆರೆಲ್)

(3) ಶಾರ್ಕ್ ಮೀನು (ಶಾರ್ಕ್)

(4) ಹಾವು ಮೀನು (ಈಲ್)

27. ಶಬ್ದವು ಯಾವ ಮಾಧ್ಯಮದ ಮೂಲಕ ಪ್ರಸಾರವಾಗುತ್ತದೆ?

(1) ಅನಿಲ ಮಾತ್ರ

(2) ಘನ ಮಾತ್ರ

(3) ದ್ರವ ಮಾತ್ರ

(4) ಘನ, ದ್ರವ ಮತ್ತು ಅನಿಲ

28. CNG ಯ ವಿಸ್ತೃತ ರೂಪ ______

(1) ಕ್ಯಾಥೋಡ್ ನಿಯಾನ್ ಗ್ಯಾಸ್

(2) ಕಂಪ್ರೆಸ್ಡ್ ನ್ಯಾಚುರಲ್ ಗ್ಯಾಸ್

(3) ಕ್ಯಾಡ್ಮಿಯಮ್ ನಿಕ್ಕಲ್ ಗ್ಯಾಸ್

(4) ಕಾಪರ್ ನೈಟ್ರೇಟ್ ಗ್ಯಾಸ್

29. ಈ ಕೆಳಕಂಡವುಗಳಲ್ಲಿ ಯಾವ ಅನಿಲವನ್ನು ಸಸ್ಯಗಳು ಉಸಿರಾಡುತ್ತವೆ?

(1) ಆಮ್ಲಜನಕ

(2) ಇಂಗಾಲದ ಡೈ ಆಕ್ಸೈಡ್

(3) ಸಾರಜನಕ

(4) ಹೀಲಿಯಂ

30. ಈ ಕೆಳಗಿನವುಗಳಲ್ಲಿ ಯಾವುದು ಮರುಬಳಕೆ ಮಾಡಬಹುದಾದ ಶಕ್ತಿಯ ಮೂಲಕ್ಕೆ ಉದಾಹರಣೆಯಾಗಿದೆ?

(1) ಕಲ್ಲಿದ್ದಲು

(2) ನೈಸರ್ಗಿಕ ಅನಿಲ

(3) ಸೌರ ಶಕ್ತಿ

(4) ಪೆಟ್ರೋಲಿಯಂ

SPACE FOR ROUGH WORK

SHIKARAT.COM

31. ಜಡತ್ವದ ನಿಯಮ ಈ ಕೆಳಗಿನ ಯಾವುದರಲ್ಲಿ ಹೆಚ್ಚಾಗಿರುತ್ತದೆ?

(1) ಕಾರ್
(2) ಲಾರಿ
(3) ಕುದರೆ ಬಂಡಿ
(4) ಆಟಿಕೆ ಕಾರು

32. APAAR (ಸ್ವಯಂಚಾಲಿತ ಶಾಶ್ವತ ಶೈಕ್ಷಣಿಕ ಖಾತೆ ನೋಂದಣಿ) ID ಯು ಇದಕ್ಕೆ ಸಂಬಂಧಿಸಿದೆ.

(1) ಒಂದು ದೇಶ, ಒಂದು ವಿದ್ಯಾರ್ಥಿ
(2) ಒಂದು ದೇಶ, ಒಂದು ಕಾಲೇಜು
(3) ಒಂದು ದೇಶ, ಒಂದು ವಿಶ್ವವಿದ್ಯಾಲಯ
(4) ಒಂದು ದೇಶ, ಒಂದು ಶಾಲೆ

33. ಚಾಂಪಿಯನ್ಸ್ (CHAMPIONS) ಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ.

a) ತಂತ್ರಜ್ಞಾನದ ಪ್ಲಾಟ್‌ಫಾರ್ಮ್ ಆಗಿ 'ಚಾಂಪಿಯನ್'ನ್ನು ಜೂನ್ 1, 2020 ರಂದು ಜಾರಿಗೆ ತರಲಾಯಿತು.

b) ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ (MSMEs) ನೈಜ ಒನ್ ಸ್ಟಾಪ್ ಶಾಪ್ ಪರಿಹಾರವಾಗಿದೆ.

c) ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು (MSMEs) ಹೊಸ ಅವಕಾಶಗಳನ್ನು ಹಿಡಿದುಕೊಳ್ಳಲು ಸಹಾಯ ಮಾಡುತ್ತದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ?

(1) a ಮಾತ್ರ
(2) b ಮಾತ್ರ
(3) a ಮತ್ತು b ಮಾತ್ರ
(4) a, b ಮತ್ತು c

34. ಡಾ. ಪ್ರಿಮ್ ರೋಸ್ ರವರು 1842 ರಲ್ಲಿ ಕರ್ನಾಟಕದ ರಾಯಚೂರು ಜಿಲ್ಲೆಯ ಲಿಂಗಸಗೂರಿನಲ್ಲಿ ಸಂಶೋಧಿಸಿದ ವಸ್ತುಗಳು.

(1) ಕಲ್ಲಿನ ಚಾಕು ಮತ್ತು ಬಾಣದ ಮೊನೆ
(2) ಮಡಿಕೆ ಚೂರುಗಳು
(3) ಅಸ್ಥಿಪಂಜರಗಳು
(4) ಆಭರಣಗಳು

35. ಭಾರತದಲ್ಲಿನ ಕೃಷಿವಲಯದಲ್ಲಿನ ನಿರುದ್ಯೋಗದ ಸ್ವರೂಪವು

a) ಋತುಮಾನ

b) ಮರೆ ಮಾಚಿದ

c) ಆವರ್ತಕ

d) ಘರ್ಷಣಾತ್ಮಕ

ಕೆಳಗೆ ನೀಡಿರುವ ಸಂಕೇತಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

(1) a ಮಾತ್ರ
(2) a ಮತ್ತು b ಮಾತ್ರ
(3) a, b ಮತ್ತು c ಮಾತ್ರ
(4) a, b, c ಮತ್ತು d

SHIKARAT.COM

SPACE FOR ROUGH WORK

36. ಸಂವಿಧಾನದ ಯಾವ ತಿದ್ದುಪಡಿಗೆ ಅನುಗುಣವಾಗಿ 'ಕರ್ನಾಟಕ ಪಂಚಾಯತ್‌ರಾಜ್ ಕಾಯಿದೆ' 1993 ಜಾರಿಗೆ ಬಂದಿದೆ?

(1) 63 ನೇ ತಿದ್ದುಪಡಿ

(2) 64 ನೇ ತಿದ್ದುಪಡಿ

(3) 73 ನೇ ತಿದ್ದುಪಡಿ

(4) 74 ನೇ ತಿದ್ದುಪಡಿ

37. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ.

a) ROSHNI: ಗ್ರಾಮೀಣ ಪ್ರದೇಶಗಳಿಗೆ ವಿದ್ಯುತ್ ಒದಗಿಸುತ್ತದೆ.

b) ROSHNI: ಯುವ ಬುಡಕಟ್ಟು ಜನಾಂಗದವರಿಗೆ ಕೌಶಲ್ಯ ಅಭಿವೃದ್ಧಿ ಯೋಜನೆ

c) ROSHNI: ಬುಡಕಟ್ಟು ಜನರಿಗೆ ವಿದ್ಯುತ್ ಒದಗಿಸುತ್ತದೆ.

ಈ ಮೇಲಿನ ಯಾವ ಹೇಳಿಕೆ/ಗಳು ಸರಿಯಾಗಿದೆ?

(1) a ಮಾತ್ರ

(2) b ಮಾತ್ರ

(3) a ಮತ್ತು b ಮಾತ್ರ

(4) c ಮತ್ತು a ಮಾತ್ರ

38. 'Elevate women' ಯೋಜನೆಯು ಇದಕ್ಕೆ/ಇವರಿಗೆ ಸಂಬಂಧಿಸಿದೆ

(1) ಮಹಿಳಾ ಉದ್ಯಮಿಗಳು

(2) ಮಹಿಳಾ ಕಾರ್ಮಿಕರು

(3) ಸ್ತ್ರೀಶಕ್ತಿ ಸಂಘಗಳು

(4) ಗೃಹಿಣಿಯರು

39. 2011 ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ ಶೌಚಾಲಯವನ್ನು ಬಳಸುವವರ ಶೇಕಡಾವಾರು

(1) 21.8 %

(2) 17.6 %

(3) 19.6 %

(4) 28.4 %

40. IR-8 ಎಂಬುದು ________ ರ ತಳಿ ವಿಧವಾಗಿದೆ.

(1) ಗೋಧಿ

(2) ಜೋಳ

(3) ಬಟಾಣಿ

(4) ಅಕ್ಕಿ

SPACE FOR ROUGH WORK

SHIKARAT.COM

41. 'ರೈತವಾರಿ' ಪದ್ಧತಿಯನ್ನು ಪರಿಚಯಿಸಿದ ರಾಜ್ಯ

(1) ತಮಿಳುನಾಡು

(2) ಮಧ್ಯಪ್ರದೇಶ

(3) ಕರ್ನಾಟಕ

(4) ಆಂಧ್ರಪ್ರದೇಶ

42. ಜುಲೈ 2024 ರಲ್ಲಿ 'ನಮ್ಮ ಮೆಟ್ರೊ'ದ ಯಾವ ಹೆಸರಿನ ಟನಲ್ ಬೋರಿಂಗ್ ಮಷಿನ್ (ಟಿಬಿಎಂ) 308 ಮೀಟರ್‌ಗಳಷ್ಟು ಸುರಂಗ ಕೊರೆಯುವುದರ ಮೂಲಕ ನೂತನ ದಾಖಲೆ ಬರೆಯಿತು?

(1) ಟಿಬಿಎಂ ಕೃಷ್ಣಾ

(2) ಟಿಬಿಎಂ ಕಾವೇರಿ

(3) ಟಿಬಿಎಂ ತುಂಗಾ

(4) ಟಿಬಿಎಂ ಉರ್ಜಾ

43. ಡೈರೆಕ್ಟರ್ ಜನರಲ್ ಮೆಡಿಕಲ್ ಸರ್ವಿಸಸ್ (ಆರ್ಮಿ) ಹುದ್ದೆಗೇರಿದ ಪ್ರಥಮ ಮಹಿಳೆ ಯಾರು?

(1) ಲೆಫ್ಟಿನೆಂಟ್ ಜನರಲ್ ಸಾಧನಾ ಸಕ್ಸೇನಾ ನಾಯರ್

(2) ಲೆಫ್ಟಿನೆಂಟ್ ಜನರಲ್ ಮಾಧುರಿ ಕಾನಿಟ್ಕರ್

(3) ಲೆಫ್ಟಿನೆಂಟ್ ಜನರಲ್ ಪುನೀತಾ ಅರೋರಾ

(4) ಲೆಫ್ಟಿನೆಂಟ್ ಜನರಲ್ ರಾಜಶ್ರೀ ರಾಮಸೇತು

SHIKARAT.COM

44. ಜುಲೈ 2024 ರಲ್ಲಿ ನಿಕೊಲಾಸ್ ಮಡುರೋರವರನ್ನು ಈ ಕೆಳಗಿನ ಯಾವ ರಾಷ್ಟ್ರದಲ್ಲಿ ಜರುಗಿದ ರಾಷ್ಟ್ರಪತಿ ಚುನಾವಣೆಯ ವಿಜೇತರೆಂದು ಗುರುತಿಸಲಾಗಿದೆ?

(1) ಇಟಲಿ
(2) ಸ್ವೀಡನ್
(3) ಚಿಲಿ
(4) ವೆನೆಜುವೆಲಾ

45. ಎಲ್ಲಾ ಗರ್ಭಿಣಿ ಮಹಿಳೆಯರು ಮತ್ತು ಮಕ್ಕಳಿಗೆ ಯುನಿವರ್ಸಲ್ ಇಮ್ಯುನೈಸೇಶನ್ ಪ್ರೋಗ್ರಾಂ (ಯುಐಪಿ) ಅಡಿ ನೀಡಲಾಗುವ ಲಸಿಕೆಗಳ ವಿವರಗಳನ್ನು ಡಿಜಿಟಲೀಕರಣ ಮಾಡಲು ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರವು ಯಾವ ಪ್ಲಾಟಫಾರಂ ಅನ್ನು ಜಾರಿಗೆ ತರಲು ಯೋಜಿಸಿದೆ?

(1) ಕೊವಿನ್
(2) ಯು-ವಿನ್
(3) ವಿ-ವಿನ್
(4) ಆಲ್‌ವಿನ್

SPACE FOR ROUGH WORK

46. 18 ನೇ ಲೋಕಸಭೆಯ ಹಂಗಾಮಿ (ತಾತ್ಕಾಲಿಕ) ಸಭಾಧ್ಯಕ್ಷರು ಯಾರಾಗಿದ್ದರು?

(1) ಶಶಿ ತರೂರ್

(2) ಭರ್ತೃಹರಿ ಮಹತಾಬ್

(3) ರಾಜ್‌ನಾಥ್ ಸಿಂಗ್

(4) ಹೆಚ್.ಡಿ. ದೇವೇಗೌಡ

47. ಭಾರತ ಸಂವಿಧಾನದ ಕೆಳಗಿನ ವಿಧಿಗಳಲ್ಲಿ ಯಾವುದು ವಿಧಾನ ಪರಿಷತ್ತಿನ ರಚನೆ ಅಥವಾ ರದ್ದತಿಯನ್ನು ಕುರಿತು ವ್ಯವಹರಿಸುತ್ತದೆ?

(1) ವಿಧಿ 169

(2) ವಿಧಿ 170

(3) ವಿಧಿ 171

(4) ವಿಧಿ 172

48. ಈ ಕೆಳಗಿನವರಲ್ಲಿ ಯಾರು ರಾಜ್ಯಗಳ ಪುನರ್ರಚನೆಯ ಜೆ.ವಿ.ಪಿ ಸಮಿತಿಯ ಅಧ್ಯಕ್ಷರಾಗಿದ್ದರು?

(1) ಜವಾಹರಲಾಲ್ ನೆಹರು

(2) ವಲ್ಲಬಭಾಯ್ ಪಟೇಲ್

(3) ಪಟ್ಟಾಭಿ ಸೀತಾರಾಮಯ್ಯ

(4) ಅದು ಅಧ್ಯಕ್ಷರನ್ನು ಹೊಂದಿರಲಿಲ್ಲ

49. ಆಕಸ್ಮಿಕ ಅಣು ವಿಕಿರಣ ಸೋರಿಕೆಯಿಂದಾದ ದುರಂತಕ್ಕೆ ಈ ಕೆಳಗಿನವುಗಳಲ್ಲಿ ಯಾವುದು ಉದಾಹರಣೆಯಾಗಿದೆ?

(1) ಥ್ರೀ ಮೈಲ್ ಐಲ್ಯಾಂಡ್

(2) ಹಿರೋಷಿಮಾ

(3) ನಾಗಸಾಕಿ

(4) ಭೂಪಾಲ್ ದುರಂತ

50. ಸರಿಹೊಂದಿಕೆಯಲ್ಲದ ಜೋಡಿಯನ್ನು ಗುರುತಿಸಿ.

(1) ಮಾಂಟ್ರಿಯಲ್ ಒಡಂಬಡಿಕೆ – ಓಝೋನ್ ನಾಶಗೊಳಿಸುವ ವಸ್ತುಗಳ ಹೊರಸೂಸುವಿಕೆ ನಿಯಂತ್ರಣ

(2) ಎಲ್ ನಿನೋ ಪರಿಣಾಮ – ಹವಾಮಾನ ಬದಲಾವಣೆ ವೈಪರೀತ್ಯಗಳು

(3) ಡಾಬ್ಸನ್ ಘಟಕಗಳು – ಹಸಿರು ಮನೆ ಅನಿಲಗಳ ಅಳತೆ ಮಾಪನ

(4) ಯುವಿ-ಬಿ ವಿಕಿರಣ – ಹಿಮಾಂಧತೆ

51. ನಗಾರೌನೊ – ಕರಬಾಖ್ ವಲಯದ ಸಂಘರ್ಷ ಯಾವ ದೇಶಗಳ ನಡುವಿದೆ?

(1) ಅಜರ್‌ಬೈಜಾನ್ ಮತ್ತು ಅರ್ಮೇನಿಯಾ

(2) ಅಜರ್‌ಬೈಜಾನ್ ಮತ್ತು ಜಾರ್ಜಿಯಾ

(3) ಜಾರ್ಜಿಯಾ ಮತ್ತು ಅರ್ಮೇನಿಯಾ

(4) ಜಾರ್ಜಿಯಾ ಮತ್ತು ರಷ್ಯಾ

SPACE FOR ROUGH WORK

SHIKARAT.COM

52. ಈ ಕೆಳಗಿನ ಯಾವ ಹೇಳಿಕೆಯು ಸರಿ ಇಲ್ಲ?

(1) ಭಾರತ ಪ್ರಪಂಚದಲ್ಲಿಯೇ ಅತಿ ಹೆಚ್ಚು ಚಿನ್ನ ಉತ್ಪಾದಿಸುವ ರಾಷ್ಟ್ರ

(2) ಚಿನ್ನ ಇದು ಲೋಹ ಖನಿಜ

(3) ಲೋಡ್ ಡಿಪಾಜಿಟ್ ಈ ಪದ ಚಿನ್ನದ ನಿಕ್ಷೇಪಕ್ಕೆ ಸಂಬಂಧಿಸಿದ್ದು

(4) ಕಾಲ್‌ಗೂರ್ಲಿ ಮತ್ತು ಕೂಲ್‌ಗಾರ್ಡಿ ಇವು ಆಸ್ಟ್ರೇಲಿಯಾದ ಚಿನ್ನದ ಗಣಿ ಕೇಂದ್ರಗಳು

53. ಭಾರತದ ನದಿಗಳಿಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

a) ಕೃಷ್ಣಾನದಿಯು ಪರ್ಯಾಯ ದ್ವೀಪ ಭಾರತದಲ್ಲಿ ಪೂರ್ವಕ್ಕೆ ಹರಿಯುವ ಎರಡನೇ ಅತಿದೊಡ್ಡ ನದಿ.

b) ತಪತಿ ನದಿಯು ಪರ್ಯಾಯ ದ್ವೀಪ ಭಾರತದಲ್ಲಿ ಪಶ್ಚಿಮಕ್ಕೆ ಹರಿಯುವ ಎರಡನೇ ಅತಿದೊಡ್ಡ ನದಿ.

ಮೇಲಿನ ಹೇಳಿಕೆಗಳಲ್ಲಿ ಯಾವುದು/ವು ಸರಿ?

(1) a ಮಾತ್ರ

(2) b ಮಾತ್ರ

(3) a ಮತ್ತು b ಎರಡೂ

(4) a ಮತ್ತು b ಎರಡೂ ಅಲ್ಲ

54. ಅವುಗಳ ಭೌಗೋಳಿಕ ವಿಸ್ತೀರ್ಣಕ್ಕೆ ಅನುಗುಣವಾಗಿ ಇಳಿಕೆ ಕ್ರಮಾನುಗತದಲ್ಲಿರುವ ಗುಂಪನ್ನು ಆರಿಸಿ.

(1) ರಾಜಸ್ಥಾನ - ಉತ್ತರಪ್ರದೇಶ - ಮಧ್ಯಪ್ರದೇಶ - ಮಹಾರಾಷ್ಟ್ರ

(2) ರಾಜಸ್ಥಾನ - ಮಧ್ಯಪ್ರದೇಶ - ಮಹಾರಾಷ್ಟ್ರ - ಉತ್ತರಪ್ರದೇಶ

(3) ಉತ್ತರಪ್ರದೇಶ - ಮಧ್ಯಪ್ರದೇಶ - ರಾಜಸ್ಥಾನ - ಮಹಾರಾಷ್ಟ್ರ

(4) ಮಹಾರಾಷ್ಟ್ರ - ಉತ್ತರಪ್ರದೇಶ - ಮಧ್ಯಪ್ರದೇಶ - ರಾಜಸ್ಥಾನ

SHIKARAT.COM

55. ಕರ್ನಾಟಕದಲ್ಲಿ ಪರ್ವತ ಪ್ರದೇಶಗಳ ಕಣಿವೆಗಳಲ್ಲಿ ಹರಿಯುವ ಝರಿ, ತೊರೆಗಳ ಅಂಚಿನಲ್ಲಿ ಬೆಳೆಯುವ ವಿಶೇಷವಾದ ಕಾಡುಗಳನ್ನು ________ ಎನ್ನುವರು

(1) ಮ್ಯಾಂಗ್ರೋವ್ ಕಾಡುಗಳು

(2) ಪರ್ವತದ ಮಿಡೋಗಳು

(3) ಸುಂದರ್‌ಬನ್ಸ್ ಕಾಡುಗಳು

(4) ಶೋಲಾ ಕಾಡುಗಳು

56. (A) ಪಟ್ಟಿಯ ಅಂಶಗಳನ್ನು (B) ಪಟ್ಟಿಯಲ್ಲಿನ ಒಂದು ಅಂಶದೊಂದಿಗೆ ಹೊಂದಿಸಿ ಬರೆಯಿರಿ.

| | A | | B |
|---|---|---|---|
| a. | ಒಳಗ್ರಹಗಳು | i. | ಶನಿ |
| b. | ಹೊರ ಗ್ರಹಗಳು | ii. | ಚಂದ್ರ |
| c. | ನಕ್ಷತ್ರ ಪುಂಜ | iii. | ಭೂಮಿ |
| d. | ಭೂಮಿಯ ಉಪಗ್ರಹ | iv. | ಓರಿಯನ್ |

(1) a – (i), b – (iii), c – (ii), d – (iv)

(2) a – (iii), b – (i), c – (iv), d – (ii)

(3) a – (iv), b – (iii), c – (i), d – (ii)

(4) a – (i), b – (ii), c – (iii), d – (iv)

SPACE FOR ROUGH WORK

57. ಕೆಳಗಿನವುಗಳಿಂದ ಹೊಂದಿಕೆಯಾಗುವ ಜೋಡಿಗಳನ್ನು ಗುರುತಿಸಿ.

a) ಶಿಲೀಂಧ್ರ – ಬ್ರೆಡ್ ಮೇಲೆ ಬೆಳೆಯುವ ಶಿಲೀಂಧ್ರ

b) ಪ್ರೋಟಿಸ್ಟಾ – ಅಮೀಬಾ

c) ವೈರಸ್ – ಹೆಚ್‌ಐವಿ

d) ಮೊನೆರಾ – ಅಣಬೆ

ಕೆಳಗೆ ನೀಡಿರುವ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) d ಮಾತ್ರ

(2) a, b, c ಮಾತ್ರ

(3) b, c, d ಮಾತ್ರ

(4) a, b, d ಮಾತ್ರ

58. ಭಾರತದ ಪಶ್ಚಿಮ ಕರಾವಳಿಯಲ್ಲಿ ಕಂಡುಬರುವ ಸರೋವರಗಳು ಯಾವುವು?

a) ಚಿಲ್ಕಾ ಸರೋವರ

b) ಕೊಲ್ಲೇರು ಸರೋವರ

c) ಸಾಂಬಾರ್ ಸರೋವರ

ಕೆಳಗೆ ಕೊಟ್ಟಿರುವ ಸಂಕೇತ ಬಳಸಿ ಸರಿಯಾದ ಉತ್ತರ ಆಯ್ಕೆ ಮಾಡಿ.

(1) a ಮಾತ್ರ

(2) a & b ಮಾತ್ರ

(3) b ಮಾತ್ರ

(4) c ಮಾತ್ರ

59. DDT ಅಣುವಿನಲ್ಲಿರುವ ಕ್ಲೋರಿನ್ ಪರಮಾಣುಗಳ ಸಂಖ್ಯೆ ________

(1) ಎರಡು

(2) ಮೂರು

(3) ನಾಲ್ಕು

(4) ಐದು

60. ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಶೇಕಡ 10% ರಷ್ಟು ಮೀಸಲಾತಿಯನ್ನು ಉದ್ಯೋಗ ಮತ್ತು ಶಿಕ್ಷಣದಲ್ಲಿ 2019 ಜಾರಿಗೆ ತಂದಂತಹ ಸಂವಿಧಾನ ತಿದ್ದುಪಡಿ ಕಾಯ್ದೆ ಯಾವುದು?

(1) 101 ತಿದ್ದುಪಡಿ ಕಾಯ್ದೆ

(2) 102 ತಿದ್ದುಪಡಿ ಕಾಯ್ದೆ

(3) 103 ತಿದ್ದುಪಡಿ ಕಾಯ್ದೆ

(4) 104 ತಿದ್ದುಪಡಿ ಕಾಯ್ದೆ

SPACE FOR ROUGH WORK

SHIKARAT.COM

61. ಸಹಕಾರಿ ಸಂಘಗಳಲ್ಲಿ ಮಹಿಳೆಯರಿಗೆ 33% ಮೀಸಲಾತಿಯನ್ನು ನೀಡಲು ಒಪ್ಪಿಗೆ ನೀಡಿದ ಭಾರತದ ಮೊದಲ ರಾಜ್ಯ ಸರ್ಕಾರ ಯಾವುದು?

(1) ಕರ್ನಾಟಕ

(2) ಗೋವಾ

(3) ಉತ್ತರಾಖಂಡ

(4) ಕೇರಳ

62. 2024 ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ 10 ಮೀ ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ಕಂಚಿನ ಪದಕವನ್ನು ಗೆದ್ದ ಭಾರತದ ಜೋಡಿಯನ್ನು ಗುರುತಿಸಿರಿ.

(1) ಮನು ಭಾಕರ್ ಮತ್ತು ಸರಬ್ಜೋತ್ ಸಿಂಗ್

(2) ಮನು ಭಾಕರ್ ಮತ್ತು ಸ್ವಪ್ನಿಲ್ ಕುಸಾಲೆ

(3) ಅಂಜುಂ ಮೌದ್ಗಿಲ್ ಮತ್ತು ಸರಬ್ಜೋತ್ ಸಿಂಗ್

(4) ಸಿಫ್ಟ್ ಕೌರ್ ಸಮ್ರ ಮತ್ತು ಸ್ವಪ್ನಿಲ್ ಕುಸಾಲೆ

63. ಭಾರತದ ಪ್ರಥಮ ಬಹುರಾಷ್ಟ್ರೀಯ ಏರ್ ಕೋಂಬ್ಯಾಟ್ ಎಕ್ಸರ್‌ಸೈಸ್ ಅನ್ನು ಹೆಸರಿಸಿರಿ. ಇದರಲ್ಲಿ 10 ರಾಷ್ಟ್ರಗಳ 67 ಫೈಟರ್‌ಜೆಟ್‌ಗಳು ಮತ್ತು ಸೇನಾಪಡೆಯ ವಿಮಾನಗಳು ಭಾಗವಹಿಸಲಿದ್ದು, ಇದರಲ್ಲಿ 18 ರಾಷ್ಟ್ರಗಳು ವೀಕ್ಷಕರಾಗಿ ಪಾಲ್ಗೊಳ್ಳಲಿವೆ.

(1) ವಾಯು ಶಕ್ತಿ

(2) ಪವನ ಶಕ್ತಿ

(3) ಯುದ್ಧ ಶಕ್ತಿ

(4) ತರಂಗ ಶಕ್ತಿ

64. ಹೊಂದಿಸಿ ಬರೆಯಿರಿ.

| | ರಾಜ್ಯಪಾಲರು | | ರಾಜ್ಯದ ಹೆಸರು |
|---|---|---|---|
| a. | ಸಿ.ಎಚ್. ವಿಜಯಶಂಕರ್ | i. | ಸಿಕ್ಕಿಂ |
| b. | ಓಂ ಪ್ರಕಾಶ್ ಮಾಥುರ್ | ii. | ಅಸ್ಸಾಂ |
| c. | ಹರಿಬಾವು ಕೆ. ಬಾಗ್ಡೆ | iii. | ರಾಜಸ್ಥಾನ |
| d. | ಲಕ್ಷ್ಮಣ ಪ್ರಸಾದ್ ಆಚಾರ್ಯ | iv. | ಮೇಘಾಲಯ |

(1) a – i, b – ii, c – iv, d – iii

(2) a – iv, b – i, c – iii, d – ii

(3) a – iii, b – ii, c – iv, d – i

(4) a – iv, b – iii, c – i, d – ii

SPACE FOR ROUGH WORK

SHIKARAT.COM

65. ಜುಲೈ 2024 ರಲ್ಲಿ ಜಿ-20 ಸಮಾವೇಶ ಜರುಗಿದ ಸ್ಥಳ ________

(1) ಕೈರೋ

(2) ರಿಯೋ ಡಿ ಜನೇರೋ

(3) ನ್ಯೂಯಾರ್ಕ್

(4) ಪ್ಯಾರಿಸ್

66. ಆಟೋಮಿಕ್ ಮಿನರಲ್ಸ್ ಡೈರೆಕ್ಟರೇಟ್ (AMD) ಇತ್ತೀಚೆಗೆ ಮಂಡ್ಯ ಜಿಲ್ಲೆಯ ಮರ್ಲಗಲ್ಲ (Marlagalla) ಪ್ರದೇಶದಲ್ಲಿ ಯಾವ ಖನಿಜದ ನಿಕ್ಷೇಪವನ್ನು ಗುರುತಿಸಿದೆ?

(1) ಲಿಥಿಯಂ

(2) ಥೋರಿಯಂ

(3) ಯುರೇನಿಯಂ

(4) ಚಿನ್ನ

SHIKARAT.COM

67. 2024-25 ರ ಕರ್ನಾಟಕ ಆಯವ್ಯಯದಲ್ಲಿ ಕರ್ನಾಟಕ ಪರಿಷ್ಕೃತ ಪ್ರವಾಸೋದ್ಯಮ ನೀತಿ ಯಾವ ಅವಧಿಗೆ ಜಾರಿಗೆ ತರಲು ನಿಗದಿಪಡಿಸಲಾಗಿದೆ?

(1) 2024 – 29

(2) 2025 – 30

(3) 2026 – 31

(4) 2021 – 25

68. ಕೆಳಗಿನ ಯಾವುದು ಕೃಷಿ ಮತ್ತು ಸಂಬಂಧಿತ ವಲಯಕ್ಕೆ ಸಂಬಂಧಿಸಿಲ್ಲ?

a) ಪಶು ಸಂಗೋಪನೆ

b) ಅರಣ್ಯಗಾರಿಕೆ

c) ಮೀನುಗಾರಿಕೆ

d) ತಯಾರಿಕೆ

ಕೆಳಗೆ ನೀಡಿರುವ ಸಂಕೇತಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

(1) a ಮತ್ತು b ಮಾತ್ರ

(2) c ಮತ್ತು d ಮಾತ್ರ

(3) b ಮಾತ್ರ

(4) d ಮಾತ್ರ

SPACE FOR ROUGH WORK

69. ಭಾರತದಲ್ಲಿ ಯಾವ ರಾಜ್ಯ ಮೊದಲಿಗೆ ಇ-ಆಸ್ಪತ್ರೆಯನ್ನು ಜಾರಿಗೆ ತಂದಿದೆ?

(1) ಮಹಾರಾಷ್ಟ್ರ

(2) ಕೇರಳ

(3) ಕರ್ನಾಟಕ

(4) ತಮಿಳುನಾಡು

70. ಈ ಕೆಳಗಿನ ಯಾವ ಕಾರ್ಯಕ್ರಮವು ಕರ್ನಾಟಕದಲ್ಲಿನ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಕ್ಕೆ ಸಂಬಂಧಿಸಿಲ್ಲ?

a) ಮಾನಸಧಾರ

b) ಟೆಲಿ ಕೌನ್ಸಿಲಿಂಗ್

c) ಮನೋ ಚೈತನ್ಯ

d) ಇ-ಸಂಜೀವಿನಿ

ಕೆಳಗಿನ ಸಂಕೇತಗಳಿಂದ ಸರಿಯಾದ ಉತ್ತರವನ್ನು ಆರಿಸಿ.

(1) a ಮತ್ತು b ಮಾತ್ರ

(2) c ಮತ್ತು d ಮಾತ್ರ

(3) c ಮಾತ್ರ

(4) d ಮಾತ್ರ

71. ಈ ಕೆಳಗೆ ನೀಡಿರುವ ಜೋಡಿಗಳಲ್ಲಿ ಸರಿಯಾದ ಜೋಡಿ ಯಾವುದು?

| | ಭಾರತದ ತುದಿಗಳು | ಸ್ಥಾನ |
|---|---|---|
| ಎ | ಇಂದಿರಾ ಪಾಯಿಂಟ್ | ಗ್ರೇಟ್ ನಿಕೋಬಾರ್ |
| ಬಿ | ಇಂದಿರಾ ಕೋಲ್ | ಲಡಾಖ್ |
| ಸಿ | ಕೇಪ್ ಕೆಮೊರಿನ್ | ತಮಿಳನಾಡು |

ಮೇಲಿನ ಜೋಡಿಗಳನ್ನು ಓದಿಕೊಂಡು ಸರಿಯಾದ ಜೋಡಿಗಳನ್ನು ಆಯ್ಕೆ ಮಾಡಿರಿ.

(1) ಎ ಮಾತ್ರ

(2) ಬಿ ಮಾತ್ರ

(3) ಸಿ ಮಾತ್ರ

(4) ಎ, ಬಿ ಮತ್ತು ಸಿ

72. ಸಂವಿಧಾನದ ಅಡಿಯಲ್ಲಿ ಮಾತೃತ್ವ ಸಂಬಂಧಿ ಪರಿಹಾರ ನಿರಾಕರಣೆಯು ಯಾವ ಹಕ್ಕಿನ ಉಲ್ಲಂಘನೆಯಾಗಿದೆ?

(1) ಸಮಾನತೆಯ ಹಕ್ಕು

(2) ಶೈಕ್ಷಣಿಕ ಹಕ್ಕು

(3) ಸ್ವಾತಂತ್ರ್ಯದ ಹಕ್ಕು

(4) ರಾಜ್ಯನೀತಿ ನಿರ್ದೇಶಕ ತತ್ವಗಳು

SPACE FOR ROUGH WORK

SHIKARAT.COM

73. 2019 ರಲ್ಲಿ ಭಾರತದ ಪ್ರಥಮ 'ವಂದೇ ಭಾರತ್ ಎಕ್ಸಪ್ರೆಸ್' ಯಾವ ಮಾರ್ಗದಲ್ಲಿ ಉದ್ಘಾಟನೆಗೊಂಡಿತು?

(1) ಮುಂಬಯಿ - ಗೋವಾ

(2) ದೆಹಲಿ - ಭೂಪಾಲ್

(3) ಮೈಸೂರು - ಚೆನ್ನೈ

(4) ದೆಹಲಿ - ವಾರಣಾಸಿ

74. 2023 ರ ವಿಶ್ವಕಪ್ ಕ್ರಿಕೆಟ್‌ನಲ್ಲಿ ಅತ್ಯಂತ ಹೆಚ್ಚು ರನ್‌ಗಳನ್ನು ಗಳಿಸಿದವರು ಯಾರು?

(1) ವಿರಾಟ್ ಕೋಹ್ಲಿ

(2) ಮೊಯಿನ್ ಅಲಿ

(3) ಗ್ಲೆನ್ ಮ್ಯಾಕ್ಸ್‌ವೆಲ್

(4) ಕ್ವಿಂಟನ್ ಡಿ ಕೋಕ್

75. ತಪ್ಪಾದ ಸಂಯೋಜನೆಯನ್ನು ಗುರುತಿಸಿ.

(1) ಅರಿವು ಕೇಂದ್ರ - ಗ್ರಾಮ ಪಂಚಾಯತಿ ಗ್ರಂಥಾಲಯ

(2) ಅಜೀವಿಕ - ಸ್ವರ್ಣಜಯಂತಿ ಸ್ವರೋಜ್‌ಗಾರ್ ಯೋಜನೆ

(3) ವಾಜಪೇಯಿ ವಸತಿ ಯೋಜನೆ - ನಗರ ಪ್ರದೇಶಗಳಿಗೆ

(4) ಜಲಜೀವನ ಮಿಷನ್ – ಎಲ್ಲಾ ನಗರ ಪ್ರದೇಶಗಳಿಗೆ ನೀರು ಪೂರೈಕೆ

76. ಏರಿಕೆ ಕ್ರಮದಲ್ಲಿ ಬರೆದಾಗ ನದಿಗಳ ಉದ್ದಕ್ಕೆ (ಕಿಲೋಮೀಟರ್‌ಗಳಲ್ಲಿ) ಅನುಗುಣವಾಗಿ ಈ ಕೆಳಗೆ ಕೊಟ್ಟಿರುವ ಉತ್ತರಗಳಲ್ಲಿ ಯಾವುದು ಸರಿಯಾದ ಕ್ರಮವಾಗಿದೆ?

(1) ಗೋದಾವರಿ - ಕಾವೇರಿ - ಕೃಷ್ಣ - ಮಹಾನದಿ

(2) ಕಾವೇರಿ - ಮಹಾನದಿ - ಕೃಷ್ಣ - ಗೋದಾವರಿ

(3) ಮಹಾನದಿ - ಗೋದಾವರಿ - ಕಾವೇರಿ - ಕೃಷ್ಣ

(4) ಕೃಷ್ಣ - ಕಾವೇರಿ - ಮಹಾನದಿ - ಗೋದಾವರಿ

77. 'ಭಾರತದ ನೈಜ ಪ್ರಗತಿಯು ಹಳ್ಳಿಗಳ ಅಭಿವೃದ್ಧಿಯಲ್ಲಿದೆ' ಎಂದು ಯಾರು ಹೇಳಿದ್ದಾರೆ?

(1) ಜವಾಹರಲಾಲ್ ನೆಹರು

(2) ಮಹಾತ್ಮಗಾಂಧಿ

(3) ಲಾಲ ಬಹದ್ದೂರ್ ಶಾಸ್ತ್ರಿ

(4) ಸರದಾರ್ ವಲ್ಲಭಬಾಯಿ ಪಟೇಲ್

SPACE FOR ROUGH WORK

SHIKAPAT.COM

78. ಈ ಕೆಳಗಿನ ರಾಜ್ಯಗಳನ್ನು ಪರಿಗಣಿಸಿ

a) ಗುಜರಾತ್

b) ಮಹಾರಾಷ್ಟ್ರ

c) ಕರ್ನಾಟಕ

d) ಕೇರಳ

ಈ ಮೇಲಿನ ಯಾವ ರಾಜ್ಯಗಳು ಅರಬ್ಬೀ ಸಮುದ್ರದ ಗಡಿಯನ್ನು ಹೊಂದಿವೆ?

(1) a ಮಾತ್ರ

(2) b ಮಾತ್ರ

(3) c ಮಾತ್ರ

(4) a, b, c ಮತ್ತು d

79. ಈ ಕೆಳಗಿನ ತೈಲ ಕ್ಷೇತ್ರಗಳಲ್ಲಿ ಯಾವುವು ಅಸ್ಸಾಂ ರಾಜ್ಯದಲ್ಲಿವೆ?

a) ದಿಗ್ಬಾಯಿ ತೈಲ ಕ್ಷೇತ್ರ

b) ಬಾಸ್ಸೀನ್ ತೈಲ ಕ್ಷೇತ್ರ

c) ಅಂಕಲೇಶ್ವರ ತೈಲ ಕ್ಷೇತ್ರ

d) ನಹರ್‌ಕಾಟಿಯ ತೈಲ ಕ್ಷೇತ್ರ

ಈ ಕೆಳಗಿನ ಕೋಡ್‌ನ್ನು ಬಳಸಿ ಸರಿಯಾದ ಉತ್ತರವನ್ನು ಆಯ್ಕೆಮಾಡಿ.

(1) b ಮತ್ತು c ಮಾತ್ರ

(2) a ಮತ್ತು d ಮಾತ್ರ

(3) a, b ಮತ್ತು c ಮಾತ್ರ

(4) c ಮತ್ತು d ಮಾತ್ರ

80. ಕರ್ಕಾಟಕ ಸಂಕ್ರಾಂತಿ ವೃತ್ತವು ಭಾರತದ ಯಾವ ರಾಜ್ಯದ ಮೂಲಕ ಹಾದುಹೋಗುವುದಿಲ್ಲ ?

(1) ರಾಜಸ್ಥಾನ

(2) ಛತ್ತೀಸ್‌ಘಡ್

(3) ಜಾರ್ಖಂಡ್

(4) ಉತ್ತರಪ್ರದೇಶ್

SPACE FOR ROUGH WORK



Scanned with CamScanner

81. ಈ ಕೆಳಕಂಡ ಜೋಡಿಗಳನ್ನು ಪರಿಗಣಿಸಿ

| ಕ್ರಾಂತಿ | ಪ್ರದೇಶ |
|---|---|
| a) ಹಳದಿ ಕ್ರಾಂತಿ | ಎಣ್ಣೆಕಾಳುಗಳು |
| b) ನೀಲಿ ಕ್ರಾಂತಿ | ಮೀನುಗಾರಿಕೆ |
| c) ಕಂದು ಕ್ರಾಂತಿ | ಕಾಫಿ/ಕೋಕೊ |
| d) ಸ್ವರ್ಣ ಕ್ರಾಂತಿ | ರಸಗೊಬ್ಬರ |

ಮೇಲ್ಕಂಡ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗಿದೆ?

(1) a ಮತ್ತು b ಮಾತ್ರ
(2) a, b ಮತ್ತು c ಮಾತ್ರ
(3) b, c ಮತ್ತು d ಮಾತ್ರ
(4) c ಮಾತ್ರ

82. ಕೆಳಗಿನ ವ್ಯಕ್ತಿಗಳಿಗೆ ಸಂಬಂಧಿಸಿದ ಮಾಹಿತಿಗಳಲ್ಲಿ ತಪ್ಪಾಗಿ ಜೋಡಿಸಿರುವುದನ್ನು ಗುರುತಿಸಿ.

a) ಲಾರ್ಡ್ ಡಾಲ್ ಹೌಸಿ - ದತ್ತು ಪುತ್ರರಿಗೆ ಹಕ್ಕಿಲ್ಲ
b) ಲಾರ್ಡ್ ವಿಲಿಯಂ ಬೆಂಟಿಂಕ್ - ಬಾಲ್ಯವಿವಾಹ ನಿಷೇಧ
c) ಲಾರ್ಡ್ ಕಾರ್ನ್‌ವಾಲೀಸ್ - ಖಾಯಂ ಜಮೀನ್ದಾರಿ ಪದ್ಧತಿ
d) ಲಾರ್ಡ್ ವೆಲ್ಲೆಸ್ಲಿ - ಸಹಾಯಕ ಸೈನ್ಯ ಪದ್ಧತಿ

(1) a ಮಾತ್ರ
(2) b ಮತ್ತು d ಮಾತ್ರ
(3) b ಮಾತ್ರ
(4) c ಮತ್ತು b ಮಾತ್ರ

83. 'ದಿನ್ ಪನ್ಹ' ಎಂಬ ಹೊಸ ನಗರವನ್ನು ಸ್ಥಾಪಿಸಿದ ಮುಸ್ಲಿಂ ಅರಸ ಯಾರು?

(1) ಮಹಮದ್-ಬಿನ್-ತುಘಲಕ್
(2) ಹುಮಾಯುನ್
(3) ಫಿರೋಜ ಷಾ ತುಘಲಕ್
(4) ಅಕ್ಬರ್

84. 'ದ್ವೈತಾದ್ವೈತ ಸಿದ್ಧಾಂತ' ವನ್ನು ಪ್ರತಿಪಾದಿಸಿದವರು ಯಾರು?

(1) ಮಧ್ವಾಚಾರ್ಯ
(2) ಶಂಕರಾಚಾರ್ಯ
(3) ನಿಂಬಾರ್ಕ
(4) ವಲ್ಲಭಾಚಾರ್ಯ

SHIKARAT.COM

SPACE FOR ROUGH WORK

85. ''ಖುದೈಖಿದ್ಮತ್‌ಗಾರ್'' ಎಂಬ ಸ್ವಯಂ ಸೇವಾದಳವನ್ನು ಸಂಘಟಿಸಿದ ಸ್ವಾತಂತ್ರ್ಯ ಹೋರಾಟಗಾರನನ್ನು ಹೆಸರಿಸಿ.

(1) ಖಾನ್ ಅಬ್ದುಲ್ ಗಫಾರ್ ಖಾನ್
(2) ರಾಜಗೋಪಾಲಾಚಾರಿ
(3) ಕೇಳಪ್ಪನ್
(4) ಹಕಿಂ ಅಜಮಲ್ ಖಾನ್

86. ಮೈಸೂರು ಕಾಂಗ್ರೆಸ್‌ನ ಪ್ರಥಮ ಅಧಿವೇಶನ ಎಲ್ಲಿ ಜರುಗಿತು?

(1) ಧಾರವಾಡ
(2) ಬೆಳಗಾವಿ
(3) ಅಂಕೋಲ
(4) ಶಿವಪುರ

87. ರಾಷ್ಟ್ರೀಯ ಪಂಚಾಯತ್ ರಾಜ್ ದಿವಸವನ್ನು ಯಾವ ದಿವಸ ಆಚರಿಸಲಾಗುತ್ತದೆ?

(1) ಜನವರಿ 25
(2) ಮಾರ್ಚ್ 05
(3) ಏಪ್ರಿಲ್ 24
(4) ಜೂನ್ 15

88. ಜಿಲ್ಲಾ ಪಂಚಾಯತ್ತಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಎಷ್ಟು ಅವಧಿಗೆ ಚುನಾಯಿಸಲಾಗುತ್ತದೆ?

(1) 15 ತಿಂಗಳುಗಳು
(2) 20 ತಿಂಗಳುಗಳು
(3) 30 ತಿಂಗಳುಗಳು
(4) 35 ತಿಂಗಳುಗಳು

89. ಪಂಚಾಯತ್‌ಗಳಲ್ಲಿರುವ ಹಣಕಾಸಿನ ಸ್ಥಿತಿಗತಿಗಳನ್ನು ವಿಮರ್ಶೆ ಮಾಡಲು ಯಾರು ಹಣಕಾಸಿನ ಆಯೋಗವನ್ನು ರಚಿಸುತ್ತಾರೆ?

(1) ಭಾರತದ ರಾಷ್ಟ್ರಪತಿ
(2) ರಾಜ್ಯಪಾಲರು
(3) ರಾಜ್ಯದ ಮುಖ್ಯಮಂತ್ರಿ
(4) ರಾಜ್ಯ ವಿಧಾನಸಭೆ

90. ಭಾರತದ ಸಂವಿಧಾನದ ಯಾವ ಷೆಡ್ಯೂಲ್ ರಾಜ್ಯ ವಿಧಾನಸಭೆ ಮತ್ತು ಪಂಚಾಯತ್‌ಗಳ ಮಧ್ಯೆ ಅಧಿಕಾರವನ್ನು ಹಂಚಿಕೆ ಮಾಡುತ್ತದೆ?

(1) 9 ಶೆಡ್ಯೂಲ್
(2) 10 ಶೆಡ್ಯೂಲ್
(3) 11 ಶೆಡ್ಯೂಲ್
(4) 12 ಶೆಡ್ಯೂಲ್

91. ಲೋಕಾಯುಕ್ತರನ್ನು ಮತ್ತು ಉಪ ಲೋಕಾಯುಕ್ತರನ್ನು ನೇಮಿಸುವವರು.

(1) ರಾಜ್ಯಪಾಲರು
(2) ರಾಷ್ಟ್ರಪತಿ
(3) ಮುಖ್ಯಮಂತ್ರಿ
(4) ಪ್ರಧಾನಮಂತ್ರಿ


---

**SPACE FOR ROUGH WORK**

SHIKARAT.COM

92. ನಿರ್ದೇಶನಗಳು (ಪ್ರಶ್ನೆ 92 – 94)

ಈ ಕೆಳಗಿನ ಲೈನ್‌ಗ್ರಾಫ್ ಅನ್ನು ಆಧರಿಸಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.




I, II ಮತ್ತು III ಪಂದ್ಯಗಳಲ್ಲಿ ರಘು ಗಳಿಸಿದ ಅಂದಾಜು ಸಂಖ್ಯೆಯ ರನ್ನುಗಳೆಷ್ಟು ?

(1) 60
(2) 65
(3) 70
(4) 75

93. ಎಲ್ಲಾ ಪಂದ್ಯಗಳನ್ನು ಸೇರಿಸಿದಾಗ ರಘು ಗಳಿಸಿದ ರನ್ನುಗಳು ಸುನೀಲನು ಗಳಿಸಿದ ರನ್ನುಗಳಿಗಿಂತ ಎಷ್ಟು ಪ್ರತಿಶತ ಹೆಚ್ಚಾಗಿದೆ?

(1) 25%
(2) 20%
(3) 24%
(4) 30%

94. ಎಲ್ಲಾ ಪಂದ್ಯಗಳಲ್ಲಿ ಸುನೀಲ ಮತ್ತು ರಘು (Sunil and Raghu) ಗಳಿಸಿದ ಒಟ್ಟು ರನ್ನುಗಳ ಅನುಪಾತ ________

(1) 3:2
(2) 2:3
(3) 5:4
(4) 4:5

95. ಒಂದು ಕುಟುಂಬದ A B C D E ಮತ್ತು F ಎಂಬ ಆರು ಮಂದಿ ಸದಸ್ಯರು ಒಟ್ಟಿಗೆ ಪ್ರಯಾಣಿಸುತ್ತಿರುತ್ತಾರೆ. B ಸದಸ್ಯ C ಯ ಮಗ ಆದರೆ C ಸದಸ್ಯ B ಯ ಅಮ್ಮ ಅಲ್ಲ . A ಮತ್ತು C ಮದುವೆಯಾದ ದಂಪತಿಗಳು. E ಸದಸ್ಯ C ಯ ಸಹೋದರ, D ಸದಸ್ಯ A ಯ ಮಗಳು. F ಸದಸ್ಯ B ಯ ಸಹೋದರಿ ಅಲ್ಲ . ಹಾಗಾದರೆ ಕುಟುಂಬದಲ್ಲಿ ಒಟ್ಟು ಎಷ್ಟು ಮಂದಿ ಪುರುಷ ಸದಸ್ಯರಿದ್ದಾರೆ?

(1) 4
(2) 3
(3) 2
(4) 1

SPACE FOR ROUGH WORK

SHIKARAT.COM


96. ಪ್ರಕಾಶವನ್ನು ಕತ್ತಲೆ ಎಂದು ಕರೆದರೆ, ಕತ್ತಲೆಯನ್ನು ಬಿಳಿ ಎಂದು ಕರೆದರೆ, ಬಿಳಿಯನ್ನು ಕಿತ್ತಳೆ ಎಂದು ಕರೆದರೆ, ಕಿತ್ತಳೆಯನ್ನು ಕೆಂಪು ಎಂದು ಕರೆದರೆ, ಕೆಂಪನ್ನು ಹಸಿರು ಎಂದು ಕರೆದರೆ, ಹಸಿರನ್ನು ನೀಲಿ ಎಂದು ಕರೆದರೆ, ಹಾಲಿನ ಬಣ್ಣ ಯಾವುದು?

(1) ಕೆಂಪು
(2) ಬಿಳಿ
(3) ನೀಲಿ
(4) ಕಿತ್ತಳೆ

97. ಒಂದು ಮೃಗಾಲಯದಲ್ಲಿ ಸಿಂಹ ಮತ್ತು ಪಾರಿವಾಳಗಳು ಇವೆ. ತಲೆ ಎಣಿಕೆ ಮಾಡಿದಾಗ ಅವುಗಳ ಒಟ್ಟು ಸಂಖ್ಯೆ 120 ಆಗುತ್ತದೆ. ಅವುಗಳ ಕಾಲುಗಳ ಒಟ್ಟು ಸಂಖ್ಯೆ 360. ಹಾಗಾದರೆ ಮೃಗಾಲಯದಲ್ಲಿ ಒಟ್ಟು ಎಷ್ಟು ಪಾರಿವಾಳಗಳಿವೆ?

(1) 40
(2) 60
(3) 48
(4) 55

98. ಪ್ರಶ್ನಾರ್ಥಕ (?) ಚಿಹ್ನೆಯ ಸ್ಥಾನದಲ್ಲಿರುವ ಅಂಕಿಯನ್ನು ಗುರುತಿಸಿ.




(1) 3
(2) 6
(3) 5
(4) 7

99. 600 ರ ಎಷ್ಟು ಶೇಕಡಾವಾರು 480 ಆಗಿದೆ?

(1) 25%
(2) 60%
(3) 80%
(4) 85%

100. ಅರ್ಚನಾ ಮನೆಯಿಂದ ಸೂರ್ಯನಿಗೆ ಮುಖ ಮಾಡಿಕೊಂಡು ನೇರವಾಗಿ 9 ಕಿ.ಮೀ. ನಡೆಯುತ್ತಾಳೆ. ನಂತರ ಆಕೆ ಬಲಕ್ಕೆ ತಿರುಗಿ 4 ಕಿ.ಮೀ. ನಡೆಯುತ್ತಾಳೆ. ನಂತರ ಆಕೆ ಮತ್ತೆ ಬಲಕ್ಕೆ ತಿರುಗಿ 2 ಕಿ.ಮೀ. ನಡೆಯುತ್ತಾಳೆ. ಮತ್ತೆ ಆಕೆ ಬಲಕ್ಕೆ ತಿರುಗಿ 2 ಕಿ.ಮೀ. ನಡೆಯುತ್ತಾಳೆ. ಆಕೆ ಮತ್ತೊಮ್ಮೆ ಬಲಕ್ಕೆ ತಿರುಗಿ ನೇರವಾಗಿ 5 ಕಿ.ಮೀ. ನಡೆಯುತ್ತಾಳೆ. ಹಾಗಾದರೆ ಆಕೆ ನಡೆಯಲು ಆರಂಭಿಸಿದ ಸ್ಥಳದಿಂದ ಎಷ್ಟು ದೂರದಲ್ಲಿದ್ದಾಳೆ?

(1) 5 ಕಿ.ಮೀ.
(2) 6 ಕಿ.ಮೀ.
(3) 3 ಕಿ.ಮೀ.
(4) 4 ಕಿ.ಮೀ.

SHIKARAT.COM

SPACE FOR ROUGH WORK